## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ರವರು ನಿಯಮ 72 ರಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.

ಪ್ರಶ್ನೆ: ರಾಜ್ಯದಲ್ಲಿ 2019 ರಿಂದ 2022 ನೇ ಸಾಲಿನವರೆಗೆ 6,810 ಮಕ್ಕಳು ಅಸಹಜವಾಗಿ ಮೃತಪಟ್ಟಿದ್ದಾರೆ. 2022 ರಲ್ಲಿ ಮೃತಪಟ್ಟವರ ಸಂಖ್ಯೆ ಅತೀ ಹೆಚ್ಚಾಗಿದ್ದು, ಇವುಗಳಲ್ಲಿ ತಾಯಿ ಮಕ್ಕಳ ಆತ್ಮಹತ್ಯೆ, ಕೃಷಿ ಹೊಂಡದಲ್ಲಿ ಬಿದ್ದು ಸಾವು ಮತ್ತು ಮಕ್ಕಳ ಆತ್ಮಹತ್ಯೆ ಪ್ರಕರಣಗಳೂ ಸೇರಿವೆ. ಈ ಅವಧಿಯಲ್ಲಿ ರಾಜ್ಯದ ರಾಜಧಾನಿ ಬೆಂಗಳೂರು ನಗರದಲ್ಲೇ ಹೆಚ್ಚು ಮಕ್ಕಳು ಮೃತಪಟ್ಟಿದ್ದಾರೆ. ಬೆಳಗಾವಿ ಮತ್ತು ತುಮಕೂರು ಜಿಲ್ಲೆಗಳು ಕ್ರಮವಾಗಿ ಎರಡು ಮೂರನೇ ಸ್ಥಾನದಲ್ಲಿವೆ. ರಾಜ್ಯದಲ್ಲಿರುವ ಅಷ್ಟೂ ಜಿಲ್ಲೆಗಳ ವ್ಯಾಪ್ತಿಯ ರೈಲ್ವೆ ಪೊಲೀಸ್ ಠಾಣೆಗಳಲ್ಲಿ 406 ಪ್ರಕರಣಗಳು ದಾಖಲಾಗಿವೆ.

ಕೋವಿಡ್ ಸಾಂಕ್ರಾಮಿಕ ಇದ್ದ ಎರಡು ವರ್ಷಗಳಲ್ಲಿಯೂ ಸಾವಿನ ಪ್ರಮಾಣ ಕಡಿಮೆ ಇದ್ದು, ನಂತರದಲ್ಲಿ ಹೆಚ್ಚಾಗಿದೆ. ಬಾಗಲಕೋಟೆ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಬೀದರ್, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹಾಸನ, ಹಾವೇರಿ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು ಗ್ರಾಮಾಂತರ, ರಾಯಚೂರು, ರಾಮನಗರ, ಶಿವಮೊಗ್ಗ, ಉತ್ತರಕನ್ನಡ, ಯಾದಗಿರಿ, ಕಲಬುರಗಿ ಗ್ರಾಮಾಂತರದಲ್ಲಿ ಪ್ರಕರಣಗಳ ಸಂಖ್ಯೆ ಮೂರಂಕಿಯಷ್ಟಿದೆ. ಕೆಲವು ಜಿಲ್ಲೆಗಳಲ್ಲಿ 100 ದಾಟಿದ್ದರೆ, ಇನ್ನೂ ಕೆಲವು ಜಿಲ್ಲೆಗಳಲ್ಲಿ 200 ದಾಟಿದೆ.

ರಾಜ್ಯದಲ್ಲಿ ಮಕ್ಕಳ ಸಾವಿನ ಪ್ರಕರಣಗಳ ಕುರಿತು ತಲಸ್ಪರ್ಶಿ ಅಧ್ಯಯನ ಹಾಗೂ ವಿಶ್ಲೇಷಣೆ ತುರ್ತಾಗಿ ಆಗಬೇಕಾದ ಕೆಲಸವಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಅಸಹಜ ಸಾವುಗಳನ್ನು ತಡೆದು ಮಕ್ಕಳ ಹಕ್ಕುಗಳ ರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು.

***

ಉತ್ತರ: ರಾಜ್ಯದಲ್ಲಿ 2019 ರಿಂದ 2023 (ನಂವೆಂಬರ್) ವರೆಗೆ ಮಕ್ಕಳು ಅಸಹಜವಾಗಿ, ತಾಯಿ ಮಕ್ಕಳ ಆತ್ಮಹತ್ಯೆ, ಕೃಷಿ ಹೊಂಡದಲ್ಲಿ ಬಿದ್ದು ಸಾವು ಮತ್ತು ಮಕ್ಕಳ ಆತ್ಮಹತ್ಯೆ ಮುಂತಾದ ಪ್ರಕರಣಗಳ ಸಂಬಂಧ ದಾಖಲಾಗಿರುವ ಪ್ರಕರಣಗಳ ಜಿಲ್ಲೆವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

**ರಾಜ್ಯದಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆ ಕುರಿತಂತೆ ಪೊಲೀಸ್ ಇಲಾಖೆಯಿಂದ ಕೈಗೊಂಡಿರುವ ಕ್ರಮಗಳು ಕೆಳಕಂಡಂತಿದೆ.**

- ರಾಜ್ಯದ ಪ್ರತಿ ಪೊಲೀಸ್ ಠಾಣೆಯ ಬೀಟ್ ಪೊಲೀಸ್ ಸಿಬ್ಬಂದಿಯವರು ಲೈಂಗಿಕ ದೌರ್ಜನ್ಯ (ಕಿಡ್ನಾಪ್/ಪೋಕ್ಸೊ/ಬಾಲ್ಯವಿವಾಹ/ಆತ್ಮಹತ್ಯೆ/ಕೊಲೆ) ಮತ್ತು ಮಕ್ಕಳ ಮೇಲಿನ ಅಪರಾಧಗಳನ್ನು ತಡೆಗಟ್ಟುವ ಕುರಿತು ಠಾಣಾ ವ್ಯಾಪ್ತಿಯ ಶಾಲೆಗಳಿಗೆ ಭೇಟಿ ನೀಡಿ ಮಕ್ಕಳ ಸ್ನೇಹಿ ವಾತಾವರಣ ಕಲ್ಪಿಸುವುದರ ಮೂಲಕ ಶಾಲಾ ವಿಧ್ಯಾರ್ಥಿಗಳಿಗೆ ಮಕ್ಕಳ ಮೇಲಿನ ದೌರ್ಜನ್ಯದ ಪರಿಕಲ್ಪನೆ ಕುರಿತು ಸೂಕ್ಷ್ಮವಾಗಿ ವಿವರಿಸಲಾಗುತ್ತಿದೆ.
- ಮಕ್ಕಳು ಲೈಂಗಿಕ ದೌರ್ಜನ್ಯದಿಂದ ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆ ಮಾಡಿಕೊಳ್ಳುವ ಸಂಭಂವವಿರುವುದರಿಂದ ಶಾಲಾ ಮಕ್ಕಳಿಗೆ (ಗಂಡು ಮತ್ತು ಹೆಣ್ಣು ಮಕ್ಕಳಿಗೆ) "ಸುರಕ್ಷಿತ ಸ್ಪರ್ಶ ಮತ್ತು ಅಸುರಕ್ಷಿತ ಸ್ಪರ್ಶಗಳ (ಗುಡ್‌ಟಚ್, ಬ್ಯಾಡ್‌ಟಚ್)" ಕುರಿತಂತೆ ಅನಿಮೇಶನ್ ಮತ್ತು ವಿಡಿಯೋಗ್ರಾಫಿ ಮೂಲಕ ಮಕ್ಕಳಿಗೆ ಅರ್ಥವಾಗುವ ರೀತಿಯಲ್ಲಿ ಅರಿವು ಮೂಡಿಸಲಾಗುತ್ತಿದೆ.
- ಮಕ್ಕಳಿಗೆ ಸಮಸ್ಯೆಯಾದಲ್ಲಿ ಮಕ್ಕಳ ಸಹಾಯವಾಣಿ–1098, ಪೊಲೀಸ್ ಸಹಾಯವಾಣಿ–112 ಗಳಿಗೆ ಕರೆ ಮಾಡುವಂತೆ ಅಲ್ಲದೇ ಮಕ್ಕಳಿಗೆ/ಶಾಲಾ ಶಿಕ್ಷಕರಿಗೆ ಸದರಿ ಸಹಾಯವಾಣಿಗಳ ಕುರಿತಂತೆ ಅರಿವು ಮೂಡಿಲಾಗುತಿದೆ.

- ಮಾನಸಿಕ ಒತ್ತಡ ಇರುವ ಹಾಗೂ ಮನೋಸ್ಥೈರ್ಯ ಇರದೇ ಇರುವ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬವ ಕಾರ್ಯಾಕ್ರಮಗಳನ್ನು ಅಯೋಜಿಸುವುದು. ಮನೋವೈದ್ಯರ ಮುಖಾಂತರ ಕೌನ್ಸಲಿಂಗ್ ಮಾಡಿಸುವ ಕುರಿತು ಕಾರ್ಯಕ್ರಮಗಳುನ್ನು ಆಯೋಜಿಸಲಾಗುತ್ತಿದೆ.
- ಪೊಲೀಸ್ ಠಾಣಾ ವ್ಯಾಪ್ತಿಯ ಶಾಲಾ, ಕಾಲೇಜುಗಳಲ್ಲಿ ಶಿಕ್ಷಕರಿಂದ ಮಕ್ಕಳ ಮೇಲೆ ನಡೆಯುವ ದೈಹಿಕ ಮತ್ತು ಮಾನಸಿಕ ಕಿರುಕುಳ ಪ್ರಕರಣಗಳ ಕುರಿತು, ಅಲ್ಲದೇ ಪುಂಡ ಪೋಕರಿಗಳು ನೀಡಬಹುದಾದ ಮಾನಸಿಕ ಕಿರುಕುಳದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಕೃಷಿ ಹೊಂಡಗಳನ್ನು ನಿರ್ಮಾಣ ಮಾಡುವಂತಹ ರೈತರುಗಳಿಗೆ ಕೃಷಿ ಹೊಂಡದ ಸುತ್ತಲು ಕೃಷಿ ಹೊಂಡದ ಬಳಿ ಯಾರು ಹೋಗದಂತೆ ಬೇಲಿಗಳನ್ನು ಅಳವಡಿಸಲು ಸೂಚನೆಗಳನ್ನು ನೀಡುತ್ತಿರುತ್ತದೆ.
- ಮಕ್ಕಳು ಮಾನಸಿಕವಾಗಿ ಕುಗ್ಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳದಂತೆ ಶಾಲೆ ಮತ್ತು ಕಾಲೇಜಿನಲ್ಲಿ ಮಕ್ಕಳಿಗೆ ಧೈರ್ಯವನ್ನು ತುಂಬುವ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.
- ಗ್ರಾಮಗಳಿಗೆ ಬೇಟಿ ನೀಡಿದಂತಹ ಸಂದರ್ಭಗಳಲ್ಲಿ ಪೋಷಕರುಗಳಿಗೆ ಮಕ್ಕಳ ನಡವಳಿಕೆ ಮತ್ತು ಚಲನವಲನಗಳ ಬಗ್ಗೆ ಗಮನವನ್ನು ಹರಿಸುವಂತೆ ಮಾರ್ಗದರ್ಶನವನ್ನು ನೀಡುತ್ತಿರುತ್ತದೆ.
- ರಾಜ್ಯದದ ಪ್ರತಿ ನಗರ/ಜಿಲ್ಲೆಗಳಲ್ಲಿ ಎಸ್.ಜೆ.ಪಿ.ಯು ಘಟಕವನ್ನು ಸ್ಥಾಪಿಸಿ, ಕಿರಿಯ ಮತ್ತು ಹಿರಿಯ ಮಕ್ಕಳ ಪೊಲೀಸ್ ಕಲ್ಯಾಣ ಅಧಿಕಾರಿಗಳನ್ನು ನಿಯೋಜಿಸಲಾಗಿದೆ.
- ಕಾನೂನು ಸಂಘರ್ಷಕ್ಕೊಳಗಾದ ಮಕ್ಕಳಿಗಾಗಿ ಎಸ್.ಜೆ.ಪಿ.ಯು ಘಟಕಕ್ಕೆ ಕರೆಯಿಸಿ ಹಾಗೂ ಜಿಲ್ಲಾ ಮಕ್ಕಳ ರಕ್ಷಣ ಘಟಕದಿಂದ ನುರಿತ ಸೈಕಾಲಜಿಸ್ಟ್ ಹಾಗೂ ಕೌನ್ಸಲರ್ ಗಳಿಂದ ಆಪ್ತ ಸಮಾಲೋಚನೆ ಮಾಡಿಸಲಾಗುತ್ತಿದೆ.
- ಅನಾಥ/ಪೋಷಕರು ಇಲ್ಲದ ಮಕ್ಕಳು ಕಂಡು ಬಂದಲ್ಲಿ ನಿಯಮಾನುಸಾರ ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿ ನಂತರ ಬಾಲ ಮಂದಿರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.
- ಸಾಮಾಜಿಕ ಜಾಲತಾಣಗಳಿಂದ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರುವಂತಹ ಆಪ್‌ಗಳಲ್ಲಿ ಕಂಡು ಬರುವ ಗೇಮ್ಸ್ ಮತ್ತು ಅಶ್ಲೀಲ ದೃಶ್ಯಗಳನ್ನು ಮಕ್ಕಳಿಗೆ ತೋರಿಸದಂತೆ ಪೋಷಕರಲ್ಲಿ ಅರಿವು ಮೂಡಿಸಿಕೊಂಡು ಬರುತ್ತಿರುತ್ತದೆ.
- ಶಾಲಾ ಕಾಲೇಜುಗಳಿಗೆ ಭೇಟಿಕೊಟ್ಟು ಮಕ್ಕಳಲ್ಲಿ ಉತ್ತಮವಾದ ಜೀವನವನ್ನು ರೂಪಿಸಿಕೊಳ್ಳುವ ಬಗ್ಗೆ ಹಾಗೂ ಯಾವುದೇ ಕೆಟ್ಟ ಆಲೋಚನೆಗಳಿಂದ ಧೃತಿಗೆಡದಂತೆ ಆತ್ಮಸ್ಥೈರ್ಯ ತುಂಬುವ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಗುತ್ತಿರುತ್ತದೆ.
- ಠಾಣಾ ವ್ಯಾಪ್ತಿಯಲ್ಲಿನ ಸ್ಲಂ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ದುಶ್ಚಟಗಲ್ಲಿ ಭಾಗಿಯಾಗಿ ಮಕ್ಕಳ ಮೇಲೆ ದುಷ್ಪರಿಣಾಮ ಬೀರದಂತೆ ನೋಡಿಕೊಳ್ಳಲು ತಿಳುವಳಿಕೆ ನೀಡಲಾಗಿದೆ.
- ಸಮಯಕ್ಕೆ ಸರಿಯಾಗಿ ಶಾಲೆಗೆ ಬಾರದ ಹಾಗೂ ಶಾಲಾ/ಕಾಲೇಜಿಗೆ ಗೈರು ಹಾಜರಾಗುವ ಮಕ್ಕಳು ಮಾನಸಿಕ ಸ್ಥಿತಿಯ ಬಗ್ಗೆ ಅರಿತುಕೊಂಡು ಶಾಲಾ/ಕಾಲೇಜು ಪೋಷಕರ ಸಲಹಾ ಸಭೆಯಲ್ಲಿ ಪೋಷಕರ ಗಮನಕ್ಕೆ ತರಲು ಶಿಕ್ಷಕರಿಗೆ ತಿಳಿಸಲಾಗಿದೆ.

ಹೆಚ್‌ಡಿ 43 ಪಿಸಿಕ್ಯೂ 2023

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು

# ಅನುಬಂಧ

| ಕ್ರಸಂ. | ಘಟಕದ ಹೆಸರು | 2019 | | | | 2020 | | | | 2021 | | | | 2022 | | | | 2023 (November) | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | ಅಸಹಜ ಸಾವುಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಕೊಲೆ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಮಕ್ಕಳ ಆತ್ಮಹತ್ಯೆ | ತಾಯಿ–ಮಕ್ಕಳ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಅಸಹಜ ಸಾವುಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಕೊಲೆ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಮಕ್ಕಳ ಆತ್ಮಹತ್ಯೆ | ತಾಯಿ–ಮಕ್ಕಳ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಅಸಹಜ ಸಾವುಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಕೊಲೆ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಮಕ್ಕಳ ಆತ್ಮಹತ್ಯೆ | ತಾಯಿ–ಮಕ್ಕಳ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಅಸಹಜ ಸಾವುಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಕೊಲೆ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಮಕ್ಕಳ ಆತ್ಮಹತ್ಯೆ | ತಾಯಿ–ಮಕ್ಕಳ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಅಸಹಜ ಸಾವುಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಕೊಲೆ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ | ಮಕ್ಕಳ ಆತ್ಮಹತ್ಯೆ | ತಾಯಿ–ಮಕ್ಕಳ ಆತ್ಮಹತ್ಯೆ ಮಾಡಿಕೊಂಡ ಪ್ರಕರಣಗಳಲ್ಲಿ ಮೃತಪಟ್ಟ ಮಕ್ಕಳ ಸಂಖ್ಯೆ |
| 1 | ಬಾಗಲಕೋಟೆ | 1 | 1 | 1 | 0 | 8 | 8 | 4 | 0 | 1 | 2 | 0 | 0 | 0 | 2 | 0 | 0 | 0 | 7 | 0 | 0 |
| 2 | ಬೆಳಗಾವಿ ನಗರ | 11 | 1 | 13 | 0 | 8 | 0 | 8 | 0 | 15 | 1 | 9 | 0 | 10 | 2 | 6 | 2 | 11 | 0 | 3 | 0 |
| 3 | ಬೆಳಗಾವಿ ಜಿಲ್ಲೆ | 73 | 6 | 13 | 1 | 91 | 7 | 18 | 1 | 68 | 7 | 38 | 2 | 73 | 7 | 28 | 1 | 44 | 6 | 30 | 0 |
| 4 | ಬಳ್ಳಾರಿ | 23 | 2 | 1 | 0 | 43 | 1 | 0 | 0 | 43 | 1 | 0 | 0 | 40 | 3 | 0 | 0 | 36 | 2 | 0 | 0 |
| 5 | ಬೆಂಗಳೂರು ನಗರ | 201 | 17 | 132 | 5 | 156 | 8 | 115 | 2 | 165 | 12 | 124 | 2 | 226 | 9 | 131 | 5 | 134 | 11 | 108 | 0 |
| 6 | ಬೆಂಗಳೂರು ಜಿಲ್ಲೆ | 28 | 1 | 6 | 0 | 38 | 0 | 7 | 0 | 31 | 2 | 13 | 2 | 42 | 3 | 15 | 4 | 38 | 4 | 6 | 3 |
| 7 | ಬೀದರ್ | 20 | 1 | 3 | 0 | 15 | 2 | 3 | 1 | 20 | 2 | 3 | 0 | 14 | 5 | 9 | 0 | 24 | 4 | 3 | 0 |
| 8 | ಚಿಕ್ಕಬಳ್ಳಾಪುರ | 14 | 2 | 1 | 0 | 29 | 0 | 7 | 0 | 29 | 0 | 7 | 0 | 29 | 1 | 8 | 0 | 43 | 5 | 15 | 0 |
| 9 | ಚಾಮರಾಜನಗರ | 12 | 2 | 1 | 0 | 7 | 1 | 3 | 0 | 8 | 0 | 4 | 0 | 10 | 0 | 2 | 0 | 7 | 3 | 2 | 1 |
| 10 | ಚಿಕ್ಕಮಗಳೂರು | 13 | 3 | 5 | 0 | 15 | 3 | 3 | 0 | 23 | 1 | 7 | 1 | 19 | 0 | 3 | 0 | 18 | 0 | 5 | 0 |
| 11 | ಚಿತ್ರದುರ್ಗಾ | 18 | 1 | 8 | 0 | 27 | 5 | 9 | 0 | 32 | 2 | 8 | 0 | 34 | 2 | 11 | 0 | 37 | 1 | 12 | 1 |
| 12 | ದಾವಣಗೆರೆ | 20 | 0 | 6 | 0 | 30 | 1 | 2 | 1 | 29 | 3 | 6 | 2 | 29 | 1 | 6 | 1 | 29 | 4 | 4 | 0 |
| 13 | ಧಾರವಾಡ | 25 | 0 | 9 | 0 | 20 | 0 | 11 | 0 | 25 | 1 | 9 | 0 | 20 | 0 | 9 | 0 | 16 | 4 | 7 | 0 |
| 14 | ದಕ್ಷಿಣ ಕನ್ನಡ | 11 | 2 | 5 | 1 | 11 | 1 | 10 | 1 | 22 | 1 | 4 | 0 | 12 | 1 | 7 | 0 | 12 | 0 | 8 | 0 |
| 15 | ಗದಗ | 15 | 1 | 2 | 0 | 14 | 0 | 8 | 4 | 12 | 4 | 2 | 0 | 23 | 2 | 4 | 0 | 12 | 3 | 4 | 1 |
| 16 | ಹಾಸನ | 11 | 0 | 3 | 0 | 13 | 0 | 2 | 0 | 12 | 2 | 4 | 1 | 26 | 1 | 7 | 1 | 19 | 1 | 10 | 0 |
| 17 | ಹಾವೇರಿ | 16 | 1 | 5 | 0 | 25 | 1 | 7 | 0 | 23 | 3 | 6 | 0 | 21 | 0 | 7 | 0 | 19 | 4 | 6 | 0 |
| 18 | ಹುಬ್ಬಳ್ಳಿ–ಧಾರವಾಡ ನಗರ | 14 | 0 | 8 | | 17 | 1 | 11 | 1 | 8 | 0 | 6 | 0 | 12 | | 9 | 0 | 8 | 2 | 8 | 0 |
| 19 | ಕಲಬುರ್ಗಿ ನಗರ | 2 | 0 | 1 | 0 | 5 | 0 | 1 | 0 | 4 | 1 | 1 | 0 | 8 | 1 | 2 | 1 | 10 | 2 | 3 | 1 |
| 20 | ಕಲಬುರ್ಗಿ ಜಿಲ್ಲೆ | 10 | 3 | 0 | 0 | 19 | 6 | 3 | 0 | 16 | 4 | 4 | 0 | 9 | 10 | 5 | 0 | 15 | 8 | 5 | 0 |

| | | | | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| 21 | ಕೆ.ಜಿ.ಎಫ್ | 10 | 0 | 4 | 0 | 13 | 2 | 2 | 0 | 9 | 1 | 0 | 0 | 11 | 1 | 0 | 0 | 11 | 0 | 1 | 0 |
| 22 | ಕೊಡಗು | 13 | 1 | 8 | 1 | 21 | 1 | 16 | 0 | 15 | 0 | 6 | 0 | 12 | 0 | 11 | 0 | 9 | 0 | 11 | 0 |
| 23 | ಕೋಲಾರ | 10 | 4 | 3 | 0 | 11 | 3 | 5 | 1 | 17 | 0 | 11 | 1 | 14 | 4 | 5 | 0 | 18 | 2 | 9 | 8 |
| 24 | ಕೊಪ್ಪಳ | 2 | 4 | 9 | 0 | 41 | 3 | 10 | 0 | 35 | 0 | 12 | 0 | 29 | 1 | 7 | 0 | 9 | 3 | 4 | 0 |
| 25 | ಮಂಡ್ಯ | 30 | 4 | 1 | 4 | 28 | 2 | 0 | 5 | 36 | 3 | 4 | 0 | 32 | 2 | 0 | 1 | 40 | 4 | 1 | 0 |
| 26 | ಮಂಗಳೂರು ನಗರ | 10 | 0 | 6 | 0 | 14 | 0 | 3 | 0 | 13 | 3 | 7 | 0 | 6 | 3 | 4 | 0 | 10 | 3 | 11 | 1 |
| 27 | ಮೈಸೂರು ನಗರ | 2 | 1 | 4 | 0 | 5 | 4 | 4 | 2 | 10 | 0 | 4 | 0 | 1 | 1 | 8 | 0 | 3 | 1 | 3 | 2 |
| 28 | ಮೈಸೂರು ಜಿಲ್ಲೆ | 12 | 0 | 0 | 1 | 26 | 0 | 4 | 0 | 27 | 2 | 3 | 0 | 15 | 4 | 4 | 0 | 21 | 3 | 3 | 0 |
| 29 | ರಾಯಚೂರು | 34 | 1 | 8 | 0 | 39 | 4 | 9 | 2 | 29 | 7 | 7 | 0 | 28 | 3 | 7 | 2 | 31 | 11 | 8 | 0 |
| 30 | ಕರ್ನಾಟಕ ರೈಲ್ವೇಸ್ | 13 | 2 | 6 | 1 | 10 | 2 | 3 | 1 | 13 | 1 | 4 | 0 | 23 | 0 | 9 | 3 | 20 | 0 | 13 | 0 |
| 31 | ರಾಮನಗರ | 20 | 0 | 9 | 0 | 22 | 3 | 4 | 0 | 19 | 3 | 10 | 0 | 13 | 1 | 8 | 0 | 29 | 0 | 6 | 0 |
| 32 | ಶಿವಮೊಗ್ಗ | 18 | 1 | 10 | 1 | 33 | 5 | 16 | | 33 | 2 | 16 | | 30 | 3 | 11 | 2 | 19 | 2 | 9 | |
| 33 | ತುಮಕೂರು | 16 | 3 | 16 | 0 | 21 | 5 | 21 | 0 | 13 | 7 | 13 | 0 | 23 | 7 | 23 | 2 | 15 | 6 | 15 | 5 |
| 34 | ಉಡುಪಿ | 16 | 4 | 8 | 0 | 18 | 0 | 5 | 0 | 10 | 1 | 13 | 0 | 14 | 1 | 9 | 0 | 22 | 1 | 11 | 0 |
| 35 | ಉತರ ಕನ್ನಡ | 22 | 2 | 5 | 0 | 14 | 1 | 14 | 1 | 15 | 1 | 8 | 0 | 14 | 3 | 12 | 1 | 20 | 1 | 6 | 1 |
| 36 | ವಿಜಯಪುರ | 34 | 2 | 7 | 0 | 55 | 0 | 9 | 0 | 31 | 5 | 9 | 0 | 31 | 1 | 16 | 5 | 42 | 8 | 12 | 3 |
| 37 | ವಿಜಯನಗರ | 36 | 6 | 1 | 0 | 40 | 3 | 0 | 0 | 37 | 2 | 0 | 0 | 50 | 0 | 2 | 0 | 27 | 3 | 0 | 0 |
| 38 | ಯಾದಗಿರಿ | 20 | 0 | 1 | 0 | 21 | 3 | 3 | 0 | 29 | 1 | 3 | 0 | 28 | 1 | 0 | 0 | 13 | 2 | 3 | 0 |
| | **Total** | **856** | **79** | **329** | **15** | **1023** | **86** | **360** | **23** | **977** | **88** | **385** | **11** | **1031** | **87** | **405** | **31** | **891** | **121** | **365** | |